

بسم اللهِ الرّحمٰن الرّحيم

# ಅಲ್ಲಾಹನ ಸಾಮೀಪ್ಯ ಗಳಿಸುವ ಕೆಲವು ವಿಧಾನಗಳು, ಅದರ ಮಹತ್ವ

**(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ 02-05-14 ರಂದು ನೀಡಿದ ಜುಮುಅ ಖುತುಬದ ಸಾರಾಂಶ)**

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಕಳೆದ ಖುತುಬಗಳಲ್ಲಿ ನಾನು ಅಲ್ಲಾಹನ ಬಗ್ಗೆ ಜ್ಞಾನಗಳಿಸುವ ವಿಧಾನ, ದೇವ ಪ್ರೀತಿಯ ವಿಧಾನ ಮತ್ತು ಅಲ್ಲಾಹನ ಅಸ್ತಿತ್ವದ ವಾಸ್ತವಿಕತೆ ಇವುಗಳನ್ನು ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬರಹಗಳನ್ನು ಉಲ್ಲೇಖಿಸಿ ವಿವರಿಸುತ್ತಾ ಇದ್ದೆನು. ಈ ದಿನ ನಾನು ಹುಝೂರ್ ಅಲೈಹಿಸ್ಸಲಾಮರ ಲೇಖನಗಳನ್ನು ಉಲ್ಲೇಖಿಸಿ ಅವರ ಜ್ಞಾನ ನಿಧಿಯಿಂದ ಅಲ್ಲಾಹನ ಸಾಮೀಪ್ಯದ ವಾಸ್ತವಿಕತೆ, ಅದನ್ನು ಗಳಿಸುವ ಕೆಲವು ವಿಧಾನಗಳು, ಅದರ ಮಹತ್ವ ಇವುಗಳ ಬಗ್ಗೆ ವಿವರಿಸುವೆನು. ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತ್ ಅದನ್ನು ಗಳಿಸುವ ಬಗ್ಗೆ ಹೊಂದಿದ ಪ್ರತೀಕ್ಷೆಗಳು ಏನೆಂದು ಸಹ ವಿವರಿಸುವೆನು.

ಅಲ್ಲಾಹನ ಸಾಮೀಪ್ಯವನ್ನು ಗಳಿಸಬೇಕಾದರೆ ನಿಜವಾದ ಒಳಿತು ಅಲ್ಲಾಹನಲ್ಲಿಯೇ ಅಡಕವಾಗಿದೆ ಎಂಬ ಜ್ಞಾನ ಹೊಂದಿರುವುದು ಆವಶ್ಯಕವಾಗಿದೆ. ಒಳಿತು ಅಲ್ಲಾಹನ ಕಡೆಯಿಂದಲೇ ಬರುತ್ತದೆ. ಅಲ್ಲಾಹನ ಆಜ್ಞೆಗಳನ್ನೂ ಉಪದೇಶಗಳನ್ನೂ ಪಾಲಿಸುವುದರ ಮೂಲಕವೇ ಅದು ಲಭಿಸುತ್ತದೆ. ಅದರ ಪರಿಣಾಮವಾಗಿ ಅಲ್ಲಾಹನಿಂದ ಬಹುಮಾನಗಳು ಮತ್ತು ಅವನ ಸಾಮೀಪ್ಯ ದೊರಕುತ್ತದೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಅಲ್ಲಾಹನ ಹೊರತು ಬೇರೆ ಯಾರೂ ಪರಿಪೂರ್ಣ ಒಳಿತನ್ನು ಹೊಂದಿರುವುದಿಲ್ಲ. ಎಲ್ಲಾ ಸದ್ಗುಣಗಳು ಮತ್ತು ಎಲ್ಲಾ ಒಳಿತುಗಳು ಅವನಲ್ಲಿ ಪರಿಪೂರ್ಣವಾಗಿದೆ. ಒಬ್ಬನು ತನ್ನ ಆತ್ಮಾಭಿಲಾಷೆಗಳನ್ನು ತ್ಯಜಿಸಿ ಪರಿಪೂರ್ಣ ಒಳಿತನ್ನು ಹೊಂದಿದ ಅಲ್ಲಾಹನ ಸಾಮೀಪ್ಯವನ್ನು ಎಷ್ಟು ಪ್ರಮಾಣದಲ್ಲಿ ಹೊಂದುತ್ತಾನೋ ಅದೇ ಪ್ರಮಾಣದಲ್ಲಿ ಅಲ್ಲಾಹನ ಗುಣವಿಶೇಷಗಳು ಅವನಲ್ಲಿ ಪ್ರತಿಬಿಂಬಿಸುತ್ತವೆ. ಮನುಷ್ಯನಿಗೆ ಲಭಿಸುವ ಒಳಿತುಗಳು ಮತ್ತು ಸಭ್ಯತೆಗಳು ಅಲ್ಲಾಹನ ಸಾಮೀಪ್ಯವನ್ನು ಗಳಿಸುವ ಮೂಲಕವೇ ಲಭಿಸುತ್ತದೆ. ಅದು ಹಾಗೆಯೇ ಆಗಬೇಕಾಗಿದೆ. ಏಕೆಂದರೆ ಸೃಷ್ಟಿಗಳು ಸ್ವತಃ ಯಾವ ಮೌಲ್ಯವೂ ಇಲ್ಲದವುಗಳಾಗಿವೆ. ಪವಿತ್ರ ಖುರ್‌ಆನನ್ನು ಪರಿಪೂರ್ಣವಾಗಿ ಅನುಸರಿಸುವ ಜನರಲ್ಲಿ ಮಾತ್ರ ಅಲ್ಲಾಹನ ಸದ್ಗುಣಗಳು ಪ್ರತಿಬಿಂಬಿಸುತ್ತವೆ.''

ಅಲ್ಲಾಹನ ಸಾಮೀಪ್ಯವನ್ನು ಗಳಿಸುವ ವಿಧಾನಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸುತ್ತಾ ಒಂದು ಕಡೆ ಹೇಳುತ್ತಾರೆ:

''ಅಲ್ಲಾಹನು ಮೋಸಕ್ಕೆ ಒಳಗಾಗುವವನಲ್ಲ. ಮೀನುಗಳ ಹಾಗೆ ಅವನ ಪ್ರೀತಿಯ ಕಡಲಲ್ಲಿ ಯಾವಾಗಲೂ ಸಹಜವಾಗಿ ಈಜಾಡುತ್ತಿರುವವರನ್ನು, ಅವನಿಗೆ ಸೇರಿದವರನ್ನು, ಮತ್ತು ಅವನ ಅನುಸರಣೆಯಲ್ಲಿ ತಲ್ಲೀನರಾಗುವವರನ್ನು ತನ್ನ ವಿಶಿಷ್ಟ ಸಾಮೀಪ್ಯಗಳಿಸಿದವರನ್ನಾಗಿ ಅವನು ಮಾಡುತ್ತಾನೆ. ತನ್ನನ್ನು ಪ್ರೀತಿಸುವವರನ್ನು ಅಲ್ಲಾಹನು ಪರಿಶುದ್ಧರನ್ನಾಗಿ ಮಾಡುತ್ತಾನೆಂಬುದು ಅವನ ನಡೆವಳಿಕೆಯಾಗಿದೆ. ವಾಸ್ತವಿಕ ಪರಿಶುದ್ಧತೆಯ ಉದ್ಭವ ಸ್ಥಾನ ಅಲ್ಲಾಹನೇ ಆಗಿದ್ದಾನೆ. ಯಾರು ಝಿಕ್ರ್ ಮತ್ತು ಆರಾಧನೆ ಮೂಲಕ ಪ್ರೀತಿಯಿಂದ ಅಲ್ಲಾಹನನ್ನು ಸ್ಮರಿಸುತ್ತಾ ಇರುತ್ತಾರೋ ಅವರ ಮೇಲೆ ಅಲ್ಲಾಹನು ತನ್ನ ಗುಣವಿಶೇಷಗಳನ್ನು ಹಾಕುತ್ತಾನೆ. ಆಗ ಅವರು ಅಲ್ಲಾಹನ ಸದ್ಗುಣಗಳಿಂದ ನೆರಳಿನ ರೂಪದಲ್ಲಿ ಪಾಲನ್ನು ಪಡೆಯುತ್ತಾರೆ. ಆ ಸದ್ಗುಣಗಳು ಅಲ್ಲಾಹನಲ್ಲಿ ವಾಸ್ತವಿಕ ರೂಪದಲ್ಲಿರುತ್ತವೆ.''

ಸದ್ಗುಣಗಳನ್ನೂ ಒಳಿತುಗಳನ್ನೂ ಮತ್ತು ಅಲ್ಲಾಹನ ಸಾಮೀಪ್ಯವನ್ನೂ ಗಳಿಸುವ ಮಾಧ್ಯಮ, ಮಾದರಿ ಮತ್ತು ಉಪದೇಶಗಳು ಅಲ್ಲಾಹನು ನಮ್ಮ ಮುಂದೆ ಇರಿಸಿದುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಪರಿಪೂರ್ಣವಾಗಿ ಅನುಸರಿಸುವ ಮೂಲಕ ಗಳಿಸಬಹುದು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ:

''ನಮ್ಮ ಪೈಗಂಬರರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕ ಹೊರತು ಮನುಷ್ಯನಿಗೆ ಸಣ್ಣ ಮಟ್ಟದ ನೇರಮಾರ್ಗ ಸಹ ಗಳಿಸಲು ಖಂಡಿತ ಸಾಧ್ಯವಿಲ್ಲವೆಂಬುದು ನಮ್ಮ ವಿಶ್ವಾಸವಾಗಿದೆ. ಹೀಗಿರುವಾಗ ಪ್ರವಾದಿಗಳ ಇಮಾಮರಾದ ಹಝ್ರತ್ ಮುಹಮ್ಮದ್ ಪೈಗಂಬರರನ್ನು ಅನುಸರಿಸದೆ ಆಧ್ಯಾತ್ಮಿಕತೆಯ ಉನ್ನತ ಮಟ್ಟಗಳನ್ನು ತಲಪಲು ಹೇಗೆ ತಾನೆ ಸಾಧ್ಯ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ನಿಷ್ಠೆಯಿಂದ ಅನುಸರಿಸುವ ಮೂಲಕ ಹೊರತು ಯಾವುದೇ ಗೌರವಾರ್ಹವಾದ ದೈವಿಕ ಸಾಮೀಪ್ಯದ ಸ್ಥಾನಗಳಿಸಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪರಿಪೂರ್ಣ ಅನುಸರಣೆಯ ಮೂಲಕ ಹೊರತು ಅಲ್ಲಾಹನ ಸಾಮೀಪ್ಯ ಖಂಡಿತ ಗಳಿಸಲು ಸಾಧ್ಯವಿಲ್ಲ. ನಮಗೆ ಅಲ್ಲಾಹನಿಂದ ದೊರಕುವುದೆಲ್ಲವೂ ನೆರಳಿನ ರೂಪದಲ್ಲಿ ಮಾತ್ರವಾಗಿದೆ.''

ಇಸ್ಲಾಮಿನ ವಾಸ್ತವಿಕತೆ ಏನು? ಒಬ್ಬ ಮುಸ್ಲಿಮನು ಹೇಗೆ ವರ್ತಿಸಬೇಕು? ಅವನು ತನಗಿರುವ ದೇವ ಸಾಮೀಪ್ಯವನ್ನು ಯಾವ ಮಟ್ಟಕ್ಕೆ ತಲಪಿಸಬೇಕು ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

''ಯಥಾರ್ಥದಲ್ಲಿ ಇಸ್ಲಾಮ್ ಎಂದರೆ ಮನುಷ್ಯನು ತನ್ನ ಕೊರಳನ್ನು ಬಲಿಯರ್ಪಿಸಲ್ಪಡುವ ಕುರಿಯ ಹಾಗೆ ಅಲ್ಲಾಹನ ಮುಂದೆ ಒಡ್ಡುವುದಾಗಿದೆ. ಅವನು ತನ್ನ ಎಲ್ಲಾ ಅಭಿಲಾಷೆಗಳನ್ನು ಕೈಬಿಟ್ಟು ಅಲ್ಲಾಹನ ನಿರ್ಧಾರಗಳಲ್ಲೂ ಅವನ ಸಂಪ್ರೀತಿಯಲ್ಲೂ ಮಗ್ನನಾಗುವುದು. ಅಲ್ಲಾಹನಲ್ಲಿ ತನ್ನನ್ನು ಲೀನ

ಮಾಡಿಕೊಂಡು ಒಂದು ಮೃತ್ಯುವನ್ನು ತನ್ನ ಮೇಲೆ ಬರಿಸುವುದಾಗಿದೆ. ಅಲ್ಲಾಹನ ಪ್ರೀತಿಯ ಬಣ್ಣದಿಂದ ತನ್ನಲ್ಲಿ ಪೂರ್ಣವಾಗಿ ಬಣ್ಣವನ್ನು ಗಳಿಸಿ ಪ್ರೀತಿಯ ಉತ್ಸಾಹದಿಂದ ಮಾತ್ರ – ಬೇರೆ ಯಾವ ಕಾರಣದಿಂದಲೂ ಅಲ್ಲ – ಅವನನ್ನು ಅನುಸರಿಸುವುದು. ಎಂತಹ ಕಣ್ಣುಗಳನ್ನು ಗಳಿಸಬೇಕೆಂದರೆ ಅವು ಅವನೊಂದಿಗೆ ನೋಡುತ್ತಿರಬೇಕು. ಎಂತಹ ಕಿವಿಯನ್ನು ಹೊಂದಬೇಕೆಂದರೆ ಅವು ಅವನೊಂದಿಗೆ ಆಲಿಸುವಂತಹವುಗಳಾಗಬೇಕು. ಎಂತಹ ಹೃದಯವನ್ನು ನಿರ್ಮಿಸಬೇಕೆಂದರೆ ಅದು ಅವನ ಕಡೆಗೆ ಮಾತ್ರ ಬಾಗಿರಬೇಕು. ಎಂತಹ ನಾಲಗೆ ಹೊಂದಬೇಕೆಂದರೆ ಅದು ಅವನ ಮಾತುಗಳನ್ನೇ ಹೇಳುವಂತಹದಾಗಿರಬೇಕು. ಇದು ಎಂತಹ ಸ್ಥಾನದ ಗಳಿಕೆ ಎಂದರೆ ಆಧ್ಯಾತ್ಮಿಕ ಪರಿಶ್ರಮಗಳು ಇಲ್ಲಿ ಪೂರ್ಣಗೊಳ್ಳುತ್ತವೆ. ಮತ್ತು ಮನುಷ್ಯನ ಶಕ್ತಿಗಳು ತಮ್ಮ ಹೊಣೆಗಾರಿಕೆಯ ಎಲ್ಲಾ ಕೆಲಸಗಳನ್ನು ಈಡೇರಿಸಿರುತ್ತದೆ.''

ಎರಡು ವಿಧಗಳ ಇಸ್ತಿಗ್‌ಫಾರ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

''ಸತ್ಯವಿಶ್ವಾಸದ ಬೇರುಗಳು ಯಾವುದರಿಂದ ಬಲಿಷ್ಠವಾಗುತ್ತಿವೆಯೋ ಆ ಇಸ್ತಿಗ್‌ಫಾರ್ ಬಗ್ಗೆ ಪವಿತ್ರ ಖುರ್‌ಆನ್ ಎರಡು ವಿಧಗಳಲ್ಲಿ ವಿವರಿಸಿದೆ:– ಮೊದಲನೆಯ ಇಸ್ತಿಗ್‌ಫಾರ್ ಹೀಗಿದೆ: ತನ್ನ ಹೃದಯದಲ್ಲಿ ಅಲ್ಲಾಹನ ಬಗ್ಗೆ ಗಾಢವಾದ ಪ್ರೀತಿಯನ್ನು ಹೊಂದಿ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿ ಪಾಪಗಳನ್ನು ತಡೆಗಟ್ಟುವುದು ಮತ್ತು ಅಲ್ಲಾಹನೊಂದಿಗೆ ಲೀನಗೊಂಡು ಅಲ್ಲಾಹನ ಸಹಾಯ ಯಾಚಿಸುವುದು. ಇದು ಅಲ್ಲಾಹನ ಸಾಮೀಪ್ಯ ಗಳಿಸಿದವರ ಇಸ್ತಿಗ್‌ಫಾರ್ ಆಗಿದೆ. ಎರಡನೆಯ ವಿಧದ ಇಸ್ತಿಗ್‌ಫಾರ್ ಪಾಪಕೃತ್ಯದಿಂದ ಹೊರಗೆ ಬಂದು ಅಲ್ಲಾಹನ ಕಡೆಗೆ ಓಡುವುದಾಗಿದೆ. ಮರವು ಭೂಮಿಯೊಂದಿಗೆ ನಾಟಿಕೊಂಡು ಇರುವ ಹಾಗೆ ಹೃದಯ ಅಲ್ಲಾಹನ ಪ್ರೀತಿಯ ಸೆರೆಯಾಳು ಆಗುವುದು. ಪರಿಶುದ್ಧಿಯು ಬೆಳವಣಿಗೆ ಹೊಂದಿ ಪಾಪವೆಂಬ ಒಣ ಅವಸ್ಥೆ ಮತ್ತು ಅದಃಪತನದಿಂದ ರಕ್ಷಣೆ ಪಡೆಯುವುದು. ಈ ಎರಡು ವಿಧಾನಗಳನ್ನು ಇಸ್ತಿಗ್‌ಫಾರ್ ಎಂದು ಕರೆಯಲಾಗಿದೆ.''

ಅಲ್ಲಾಹನ ಸಾಮೀಪ್ಯ ಗಳಿಸುವಿಕೆಯ ವಿವಿಧ ಹಂತಗಳನ್ನು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

''ಅಲ್ಲಾಹನೊಂದಿಗೆ ಸಂಬಂಧ ಸ್ಥಾಪನೆ ಮತ್ತು ಸಾಮೀಪ್ಯ ಗಳಿಸುವಿಕೆಯ ವಿವಿಧ ಅಂತಸ್ತುಗಳಿವೆ. ಒಬ್ಬ ವ್ಯಕ್ತಿ ಅಲ್ಲಾಹನ ಸಾಮೀಪ್ಯ ಗಳಿಸಿದವನಾಗಿದ್ದರೂ ಅವನು ಅವನಿಗಿಂತ ದೇವ ಸಾಮೀಪ್ಯ ಮತ್ತು ದೇವ ಪ್ರೀತಿಯಲ್ಲಿ ಮೇಲಿನ ಅಂತಸ್ತನ್ನು ಗಳಿಸಿದವನ ವಿರುದ್ಧವಾಗಿ ನಿಲ್ಲುವಾಗ ಯಾವ ವ್ಯಕ್ತಿ ದೇವ ಸಾಮೀಪ್ಯದಲ್ಲಿ ಕೀಳು ಮಟ್ಟದಲ್ಲಿರುವನೋ ಅವನು ನಾಶವಾಗುತ್ತಾನೆ. ಮಾತ್ರವಲ್ಲ ಸ್ವತಃ ಸತ್ಯ ವಿಶ್ವಾಸವನ್ನು ಕಳೆದುಕೊಂಡು ಸಾಯುತ್ತಾನೆ. ಇದಕ್ಕೆ ಉದಾಹರಣೆ ಹಝ್ರತ್ ಮೂಸಾ ಅಲೈಹಿಸ್ಸಲಾಮರನ್ನು ಎದುರಿಸಿದ ಬಲ್‌ಅಮ್ ಬಾಊರ್ ಆಗಿದ್ದಾನೆ.''

ಅಲ್ಲಾಹನ ಸಾಮೀಪ್ಯ ಗಳಿಸಲು ಇರುವ ಮಾರ್ಗವಾದ ಪ್ರಾರ್ಥನೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

''ಪ್ರಾರ್ಥನೆಯ ಉದಾಹರಣೆ ಸಿಹಿ ನೀರಿನ ಕಾರಂಜಿಯ ಸಮೀಪ ಕುಳಿತುಕೊಂಡ ಸತ್ಯ ವಿಶ್ವಾಸಿಯ ಹಾಗಿದೆ. ಸತ್ಯ ವಿಶ್ವಾಸಿ ಬಯಸುವಾಗ ಅದರಿಂದ ನೀರನ್ನು ಕುಡಿದು ದಾಹ ನಿವಾರಣೆ ಹೊಂದಬಲ್ಲವನಾಗಿದ್ದಾನೆ. ಮೀನು ನೀರಿಲ್ಲದೆ ಬದುಕಲಾರದು. ಇದೇ ರೀತಿ ಸತ್ಯ ವಿಶ್ವಾಸಿಗೆ ಜೀವದಾಯಕವಾದ ನೀರು ಪ್ರಾರ್ಥನೆ ಆಗಿದೆ. ಪ್ರಾರ್ಥನೆಯ ಸರಿಯಾದ ಸ್ಥಾನ ನಮಾಝ್ ಆಗಿದೆ. ನಮಾಝ್ ಮೂಲಕವೇ ಸರಿಯಾದ ಪ್ರಾರ್ಥನೆ ಸಾಧ್ಯವಾಗುವುದು. ನಮಾಝ್ ಮೂಲಕ ಸರಿಯಾದ ನೆಮ್ಮದಿ ಮತ್ತು ಸಂತೋಷ ಲಭಿಸುತ್ತದೆ. ಸತ್ಯ ವಿಶ್ವಾಸಿಗೆ ನಮಾಝ್ ಮೂಲಕ ಎಂತಹ ನೆಮ್ಮದಿ ಮತ್ತು ಸಂತೋಷ ಲಭಿಸುತ್ತದೆ ಎಂದರೆ ಒಬ್ಬ ಭೋಗಲಾಲಸಿಗೆ ತನ್ನ ಕುಕೃತ್ಯದಿಂದ ದೊರಕುವ ಸಂತೋಷ ಅದರೆದುರಿಗೆ ನಗಣ್ಯವಾಗಿದೆ. ಪ್ರಾರ್ಥನೆಯಿಂದ ದೊರಕುವ ಮಹತ್ವಪೂರ್ಣವಾದ ಸಂಗತಿ ಅಲ್ಲಾಹನ ಸಾಮೀಪ್ಯವಾಗಿದೆ. ಪ್ರಾರ್ಥನೆ ಮೂಲಕವೇ ಸತ್ಯವಿಶ್ವಾಸಿ ಅಲ್ಲಾಹನಿಗೆ ಸಮೀಪವಾಗುತ್ತಾನೆ ಮತ್ತು ಅವನನ್ನು ತನ್ನ ಕಡೆಗೆ ಎಳೆದು ಕೊಳ್ಳುತ್ತಾನೆ.''

ಅಲ್ಲಾಹನ ಸಾಮೀಪ್ಯಗಳಿಸಲು ನಮಾಝನ್ನು ನಿಷ್ಠೆಯಿಂದ ಅನುಷ್ಠಿಸಬೇಕಾದುದು ಸಹ ಅತೀ ಅಗತ್ಯವಾಗಿದೆ. ಅದರೊಂದಿಗೆ ಸತ್ಕರ್ಮಗಳನ್ನು ಮಾಡುವ ಬಗ್ಗೆ ಗಮನ ಹರಿಸಬೇಕೆಂದು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

''ಸತ್ಕರ್ಮಗಳನ್ನು ಮಾಡುವುದು ಬಹಳ ದೊಡ್ಡ ಅನುಗ್ರಹವಾಗಿದೆ. ಸತ್ಕರ್ಮದಿಂದ ಅಲ್ಲಾಹನು ಸಂತೃಪ್ತನಾಗುತ್ತಾನೆ ಮತ್ತು ಸತ್ಯ ವಿಶ್ವಾಸಿಗೆ ಅದರಿಂದ ಅಲ್ಲಾಹನ ಸಾಮೀಪ್ಯ ಲಭಿಸುತ್ತದೆ. ಮದ್ಯವನ್ನು ಕುಡಿಯುವವನಿಗೆ ಅದರ ಕೊನೆಯ ಗುಟುಕು ಕುಡಿದನಂತರ ಮತ್ತೇರುವ ಹಾಗೆ ಸತ್ಕರ್ಮಗಳ ಅನುಗ್ರಹಗಳು ಅದರ ಆಧಿಕ್ಯವನ್ನು ಹೊಂದಿಕೊಂಡಿರುತ್ತದೆ. ಸತ್ಕರ್ಮಗಳನ್ನು ಪರಿಪೂರ್ಣತೆಗೆ ತಲಪಿಸುವವನು ಅಲ್ಲಾಹನ ಅನುಗ್ರಹಗಳಿಂದ ಪುನೀತನಾಗುತ್ತಾನೆ. ಆದರೆ ಮಧ್ಯದಲ್ಲಿಯೇ ಅದನ್ನು ನಿಲ್ಲಿಸುವವನು ಅನುಗ್ರಹಗಳಿಂದ ವಂಚಿತನಾಗುತ್ತಾನೆ. ಮನುಷ್ಯನಿಗೆ ದೊರಕಬಹುದಾದ ಅತಿದೊಡ್ಡ ಗೌರವ ಮತ್ತು ಅನುಗ್ರಹ ಅವನು ಅಲ್ಲಾಹನ ಸಾಮೀಪ್ಯಗಳಿಸುವುದಾಗಿದೆ. ಒಬ್ಬನಿಗೆ ಅಲ್ಲಾಹನ ಸಾಮೀಪ್ಯ ಲಭಿಸಿದರೆ ಅವನಿಗೆ ಸಾವಿರಾರು ಅನುಗ್ರಹಗಳನ್ನು ಅಲ್ಲಾಹನು ಸುರಿಸುತ್ತಾನೆ. ಭೂಮಿಯಿಂದಲೂ ಆಕಾಶದಿಂದಲೂ ಅವನ ಮೇಲೆ ಅನುಗ್ರಹಗಳು ಇಳಿಸಲ್ಪಡುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ನಾಶಮಾಡಲು ಮಕ್ಕದ ಖುರೈಶಿಗಳು ಎಷ್ಟು ತೀವ್ರವಾಗಿ ಪ್ರಯತ್ನಿಸಿದ್ದರು! ಅವರು ಒಂದು ಸಮುದಾಯವಾಗಿದ್ದು ಅವರೆದುರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಏಕಾಂಗಿ ಆಗಿದ್ದರು. ಆದರೆ ನೋಡಿರಿ ಯಾರು ಜಯಶಾಲಿಯಾದರು. ಯಾರು ಸೋತುಹೋದರು. ಅಲ್ಲಾಹನ ಸಹಾಯ ಮತ್ತು ಬೆಂಬಲ ಅಲ್ಲಾಹನ ಸಾಮೀಪ್ಯ ಗಳಿಸಿದವರ ಬಹಳ ದೊಡ್ಡ ಹೆಗ್ಗುರುತ್ತಾಗಿದೆ.''

ಅಲ್ಲಾಹನ ಸಾಮೀಪ್ಯ ಗಳಿಕೆಯ ಮಟ್ಟವನ್ನು ವರ್ಧಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಅಲ್ಲಾಹನ ಶಾಪದ ಬಗ್ಗೆ ಭಯಪಡಿರಿ. ಅವನು ಪರಿಶುದ್ಧನೂ ಅಭಿಮಾನಿಯೂ ಆಗಿದ್ದಾನೆ. ದುಷ್ಕರ್ಮಿ ಅಲ್ಲಾಹನ ಸಾಮೀಪ್ಯಗಳಿಸಲಾರ. ದುರಹಂಕಾರಿಯಾದವನು ಅವನ ಸಾಮೀಪ್ಯ ಗಳಿಸಲಾರ. ದೌರ್ಜನ್ಯಗಾರ ಅವನ ಸಾಮೀಪ್ಯಗಳಿಸಲಾರ. ವಿಶ್ವಾಸವಂಚಕ ಅವನ ಸಾಮೀಪ್ಯಗಳಿಸಲಾರ. ಅಲ್ಲಾಹನ ನಾಮದ ಬಗ್ಗೆ ಅಭಿಮಾನ ಹೊಂದದವನು ಅವನ ಸಾಮೀಪ್ಯ ಗಳಿಸಲಾರ. ಲೌಕಿಕ ಸಾಮಾಗ್ರಿಗಳ ಮೇಲೆ ನಾಯಿಗಳ ಹಾಗೆ, ಇರುವೆಗಳ ಹಾಗೆ, ಅಥವಾ ರಣಹದ್ದುಗಳ ಹಾಗೆ ಬೀಳುವವರು ಮತ್ತು ಲೌಕಿಕ ಸಾಮಾಗ್ರಿಗಳಿಂದ ಸುಖಲೋಲುಪರಾಗುವವರು ಅವನ ಸಾಮೀಪ್ಯವನ್ನು ಗಳಿಸಲಾರರು. ಪ್ರತಿಯೊಂದು ಕೊಳಕು ಕಣ್ಣು ಅವನಿಂದ ದೂರವಿದೆ. ಪ್ರತಿಯೊಂದು ಅಶುದ್ಧ ಹೃದಯ ಅವನ ಬಗ್ಗೆ ಅಜ್ಞಾನದಿಂದಿದೆ. ಯಾರು ಅವನಿಗೋಸ್ಕರ ಬೆಂಕಿಯಾಗುತ್ತಾನೋ ಅವನು ಬೆಂಕಿಯಿಂದ ರಕ್ಷಿಸಲ್ಪಡುವನು. ಯಾರು ಅವನಿಗೋಸ್ಕರ ಅಳುತ್ತಾನೋ ಅವನು ನಗುವನು. ಯಾರು ಅವನಿಗೋಸ್ಕರ ಲೌಕಿಕ ಸಂಬಂಧಗಳನ್ನು ಕಡಿದು ಹಾಕುತ್ತಾನೋ ಅವನಿಗೆ ಅದು ಸಿಗುವುದು. ನೀವು ಸತ್ಯ ಹೃದಯದೊಂದಿಗೆ ಪೂರ್ಣಸತ್ಯದೊಂದಿಗೆ, ಉತ್ಸಾಹಭರಿತ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಿ ಅಲ್ಲಾಹನ ಸ್ನೇಹಿತರಾಗಿರಿ. ಅವನು ಸಹ ನಿಮ್ಮ ಸ್ನೇಹಿತನಾಗಲಿ. ನೀವು ನಿಮ್ಮ ಅಧೀನದಲ್ಲಿರುವವರೊಡನೆ, ನಿಮ್ಮ ಪತ್ನಿಯರೊಡನೆ ಮತ್ತು ನಿಮ್ಮ ದುರ್ಬಲ-ದರಿದ್ರ ಸಹೋದರರೊಡನೆ ದಯೆ ತೋರಿಸಿರಿ- ಆಕಾಶದಿಂದ ನಿಮ್ಮ ಮೇಲೆ ಕರುಣೆ ಸುರಿಯುವಂತಾಗಲು. ನೀವು ನಿಜವಾದ ಅರ್ಥದಲ್ಲಿ ಅಲ್ಲಾಹನದ್ದಾಗಿರಿ, ಅವನು ಸಹ ನಿಮ್ಮವನಾಗುವನು."

ತನ್ನ ಸಾಮೀಪ್ಯ ಗಳಿಸಿದವರಿಗೋಸ್ಕರ ಅಲ್ಲಾಹನು ಹೇಗೆ ತನ್ನ ಅಭಿಮಾನವನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳನ್ನು ಹೇಗೆ ನಾಶಗೊಳಿಸುತ್ತಾನೆ ಎನ್ನುವುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳುತ್ತಾರೆ:

"ಅಪಮಾನ ಮತ್ತು ದೌರ್ಜನ್ಯಗಳಲ್ಲಿ ಶತ್ರುಗಳು ಮೇರೆ ಮೀರುವಾಗ ಮತ್ತು ಅಲ್ಲಾಹನು ನಿರ್ಧರಿಸಿದ ಪರೀಕ್ಷೆಗಳು ಪೂರ್ಣಗೊಂಡಾಗ ಅಲ್ಲಾಹನ ಅಭಿಮಾನ ತನ್ನ ಮಿತ್ರರಿಗೋಸ್ಕರ ಕಾರ್ಯೋನ್ಮುಖವಾಗುತ್ತದೆ. ಅವನು ತನ್ನ ಮಿತ್ರರ ಕಡೆಗೆ ನೋಡುತ್ತಾನೆ. ಅವರು ದೌರ್ಜನ್ಯ ಪೀಡಿತರಾಗಿದ್ದಾರೆಂದು ಕಾಣುತ್ತಾನೆ. ಅವರ ಮೇಲೆ ಅಕ್ರಮ ನಡೆಸಲಾಗಿದೆ. ಅವರನ್ನು ನಿಂದಿಸಲಾಗಿದೆ. ಅನ್ಯಾಯವಾಗಿ "ಕಾಫಿರ್" ಎಂದು ಕರೆಯಲಾಗಿದೆ. ಮತ್ತು ಅಕ್ರಮಿಗಳಿಂದ ಕಷ್ಟಕ್ಕೊಳಗಾಗಿದ್ದಾರೆ- ಎಂದು ಅಲ್ಲಾಹನು ಕಾಣುತ್ತಾನೆ. ಆಗ ಅವನು ತನ್ನ ನಡೆವಳಿಕೆಗಳನ್ನು ಈಡೇರಿಸಲು ಮತ್ತು ತನ್ನ ಅನುಗ್ರಹವನ್ನು ತೋರಿಸಲು ಸಿದ್ಧನಾಗುತ್ತಾನೆ. ಅವನು ತನ್ನ ಸಾತ್ವಿಕರಾದ ದಾಸರಿಗೆ ಸಹಾಯ ನೀಡಲಿಕ್ಕಾಗಿ ತನ್ನ ಕಡೆಗೆ ಅಭಿಮುಖೀಕರಿಸಬೇಕೆಂದು ಅವರ ಹೃದಯಗಳಲ್ಲಿ ಯೋಚನೆ ಸ್ಫುರಿಸುತ್ತಾನೆ. ಆಗ ಅವರು ಬೆಳಗ್ಗೆ ರಾತ್ರಿ ಅವನ ಸನ್ನಿಧಿಯಲ್ಲಿ ಗೋಳಿಟ್ಟು ಪ್ರಾರ್ಥಿಸುತ್ತಾರೆ. ಆಗ ಅಲ್ಲಾಹನು ತನ್ನ ಸಾಮೀಪ್ಯ ಗಳಿಸಿದವರ ಬಗ್ಗೆ ತನ್ನ ನಡೆವಳಿಕೆ ಜಾರಿಗೊಳಿಸುತ್ತಾನೆ. ಕೊನೆಗೆ ಐಶ್ವರ್ಯ ಮತ್ತು ಸಹಾಯ ಅವರಿಗೆ ಲಭಿಸುತ್ತದೆ. ಅವರ ಶತ್ರುಗಳನ್ನು ಸಿಂಹಗಳಿಗೂ ಚಿರತೆಗಳಿಗೂ ಆಹಾರವನ್ನಾಗಿ ಮಾಡಿಬಿಡಲಾಗುತ್ತದೆ. ಸಾತ್ವಿಕರ ಬಗ್ಗೆ ಅಲ್ಲಾಹನ ನಡೆವಳಿಕೆ ಇದೇರೀತಿ ಜಾರಿಯಲ್ಲಿರುತ್ತದೆ. ಅವರು ನಾಶಗೊಳಿಸಲ್ಪಡುವುದಿಲ್ಲ. ಅವರಿಗೆ ಅನುಗ್ರಹ ನೀಡಲ್ಪಡುತ್ತದೆ. ಅವರು ನಿಂದಿಸಲ್ಪಡುವುದಿಲ್ಲ. ಅವರಿಗೆ ಗೌರವ ನೀಡಲ್ಪಡುತ್ತದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶತ್ರುಗಳೊಂದಿಗೆ ಸಹ ಅಲ್ಲಾಹನು ಹೀಗೆ ವರ್ತಿಸಿದುದನ್ನು ನಾವು ನಿಶ್ಚಯವಾಗಿಯೂ ಕಂಡಿರುವೆವು. ಶತ್ರುಗಳನ್ನು ಅಲ್ಲಾಹನು ಹೀನಾಯಗೊಳಿಸಿದನು. ಒಂದು ಸಾರಿ ಅಲ್ಲ, ಅನೇಕ ಸಾರಿ. ಪದೇ ಪದೇ ವಿವಿಧ ಪ್ರದೇಶಗಳಲ್ಲೂ ವಿವಿಧ ದೇಶಗಳಲ್ಲೂ ಅಹ್ಮದಿಯಾ ಜಮಾಅತಿನ ಶತ್ರುಗಳು ಅಪಮಾನಿತರಾಗಿ ನಾಶವಾದುದನ್ನು ನಾವು ಕಂಡಿರುವೆವು. ಈಗ ಸಹ ಇಂತಹ ದೃಶ್ಯಗಳನ್ನು ನಾವು ಕಾಣುತ್ತೇವೆ. ನಾನು ಎಲ್ಲಾ ಅಹ್ಮದಿಯರಿಗೆ ಮತ್ತು ವಿಶಿಷ್ಟವಾಗಿ ಪಾಕಿಸ್ಥಾನದ ಅಹ್ಮದಿಯರಿಗೆ ಹೇಳಬಯಸುತ್ತೇನೆ. ಅಹ್ಮದಿಯತ್ತಿನ ಶತ್ರುಗಳ ವಿರುದ್ಧ ಅಲ್ಲಾಹನ ಚಾಟಿ ಬೀಸುವುದು. ನಿಶ್ಚಯವಾಗಿಯೂ ಆ ಚಾಟಿ ಬೀಸುವುದು ಇನ್‌ಶಾ ಅಲ್ಲಾಹ್. ಚಿಕ್ಕ ಪ್ರಮಾಣದಲ್ಲಿ ಅದರ ದೃಶ್ಯಗಳನ್ನು ನಾವು ಈಗಾಗಲೇ ಕಾಣುತ್ತಿದ್ದೇವೆ. ಮುಂದೆ ಸಹ ನಾವು ಕಾಣಲಿದ್ದೇವೆ. ಆದರೆ ಈ ದೃಶ್ಯಗಳನ್ನು ವಿಶಾಲವಾಗಿ ಬೇಗನೆ ಕಾಣಬೇಕಾದರೆ ಪಾಕಿಸ್ಥಾನದಲ್ಲಿ ವಾಸಿಸುವ ಅಹ್ಮದಿಯರೂ ಪಾಕಿಸ್ಥಾನದೊಂದಿಗೆ ಸಂಬಂಧ ಹೊಂದಿದ ಅಹ್ಮದಿಯರೂ ಅಲ್ಲಾಹನ ಸಾಮೀಪ್ಯವನ್ನು ವರ್ಧಿಸಲು ಪ್ರಯತ್ನಿಸಬೇಕಾದುದು ಆವಶ್ಯಕವಾಗಿದೆ. ಆದುದರಿಂದ ನೀವು ಲೋಕವನ್ನು ಹಿಂದಕ್ಕೆ ತಳ್ಳಿರಿ. ಅಲ್ಲಾಹನ ಸಾಮೀಪ್ಯವನ್ನು ವರ್ಧಿಸುತ್ತಾ ಮುಂದೆ ಸಾಗಿರಿ. ಈ ದೃಶ್ಯಗಳನ್ನು ಕಾಣಬೇಕಾದರೆ ನಾವು ನಮ್ಮ ಪ್ರಯತ್ನಗಳನ್ನು ಊರ್ಜಿತಗೊಳಿಸಬೇಕಾಗಿದೆ. ಲೋಕದ ಇತರ ಕಡೆಗಳಲ್ಲಿ ವಾಸಿಸುವ ಅಹ್ಮದಿಯರೂ ಇದರ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಬೇಕು. ಲೋಕದಿಂದ ಶೈತಾನನ ರಾಜ್ಯಭಾರ ಬೇಗನೆ ಕೊನೆಗೊಳ್ಳಲಿ. ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಿದವರ ರಾಜ್ಯಭಾರ ಬೇಗನೆ ಸ್ಥಾಪಿತವಾಗಲಿ. ಇಂತಹ ಪ್ರಾರ್ಥನೆ ಮಾಡುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ. ಅಲ್ಲಾಹನ ಸಾಮೀಪ್ಯ ಗಳಿಸಿದವರ ಜೊತೆ ಸೇರುವ ಭಾಗ್ಯವನ್ನು ಸಹ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

---------------*****---------------

*Friday Sermon delivered by Hadrath Khaleefathul Masih Al Khamis (atba)*
*at Masjid Baithul Futhuh, London on 02-05-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team, *Ahmadiyya Muslim Jama`at, Karnataka*

**Contact Us**:
Darussalam, Ahmadiyya Muslim Mission,
Behind Deltawest Building, Near Railway Level Crossing,
Pandeshwar, Mangalore – 575 001

*Email*: **khutuba.kannada@gmail.com**